ಮಾರ್ಕ್ಸ್‌ವಾದಿಗಳನ್ನು ಅಂಬೇಡ್ಕರ್ ತಮ್ಮ ಪ್ರತಿಸ್ಪರ್ಧಿಗಳೆಂದು ಪರಿಗಣಿಸಿದರೂ ತಮ್ಮ ವಿಚಾರ ಅದಕ್ಕಿಂತ ಉತ್ತಮವಾಗಿತ್ತೆಂದು ನಂಬಿದ್ದರು. ಜಾತಿ ವ್ಯವಸ್ಥೆಯ ಸಮಸ್ಯೆಯನ್ನು ಪರಿಹಾರ ಮಾಡಲು ಮಾರ್ಕ್ಸ್‌ವಾದ ಯಾವ ರೀತಿಯಿಂದಲೂ ಪ್ರಯಾಸ ಮಾಡಲಿಲ್ಲ ಮತ್ತು ಭಾರತೀಯ ಸಂದರ್ಭದಲ್ಲಿ ಮಾರ್ಕ್ಸ್‌ವಾದದ ಪ್ರಸ್ತುತತೆ ಕಾಣುವುದಿಲ್ಲ ಎನ್ನುವುದು ಅಂಬೇಡ್ಕರ್ ಮಂಡಿಸಿದ ವಾದ. ಇದು ಒಂದು ಆಸಕ್ತಿಕರವಾದ ವಿಚಾರ. ಜಾತಿವಾರು ವ್ಯವಸ್ಥೆಯಲ್ಲಿ ಕೈಗೊಳ್ಳುವ ಕಾಯಕವನ್ನೇ ಜಾತಿಪ್ರತೀಕವನ್ನಾಗಿ ಉಪಯೋಗಿಸುತ್ತಿರುವಾಗ, ಮಾರ್ಕ್ಸ್‌ವಾದ ಆ ಕಾಯಕವನ್ನು ಕೈಗೊಳ್ಳುವ ಜನರನ್ನು ಸಂಘಟಿಸುವ ಕೆಲಸ ಮಾಡುವ ಮೂಲಕ ಒಂದು ಪರಿಮಿತಿಯಲ್ಲಿ ಮಾತ್ರ ಹಕ್ಕುಗಳನ್ನು ಸ್ಥಾಪಿಸುವತ್ತ ಪ್ರಯಾಸಪಡುತ್ತದೆಯೇ ಹೊರತು – ಕಾಯಕಗಳ ನಡುವಿನ ಗೋಡೆಗಳನ್ನು ಮುರಿಯುವ ಕೆಲಸದಲ್ಲಿ ಹೆಚ್ಚಿನ ಸಫಲತೆಯನ್ನು ಪಡೆಯುವುದಿಲ್ಲ ಎಂದು ತೇಲ್ತುಂಬ್ಡೆ ವಾದಿಸುತ್ತಾರೆ. ಅವರು ಮಾರ್ಕ್ಸ್‌ವಾದದ ಕ್ರಾಂತಿಯ ಪಥವನ್ನು ನಿರಾಕರಿಸುತ್ತಲೇ, ಸರ್ವ ಕ್ಷೇತ್ರಗಳಲ್ಲೂ ಅತ್ಯವಶ್ಯಕವಾದ ಪ್ರಾತಿನಿಧಿತ್ವದ ಮಾತಾಡುತ್ತಾರೆ. ಕಾರ್ಮಿಕರ ಸಂಘಟನೆಯು ಒಂದು ರೀತಿಯಲ್ಲಿ ಆರ್ಥಿಕ ಸಮಾನತೆಯ ಪ್ರಶ್ನೆಗಳನ್ನು ಎತ್ತಬಹುದಾದರೂ ತಲೆತಲಾಂತರದಿಂದ ಬಂದಿರುವ ಮೂಲಭೂತ ತಾರತಮ್ಯ ಮತ್ತು ಸಾಮಾಜಿಕ ಸಮಾನತೆಯನ್ನು ಬುಡಮೇಲು ಮಾಡುವುದರಲ್ಲಿ ಸಫಲವಾಗುವುದಿಲ್ಲ. ಹೀಗೆ ವಾಮಪಂಥದ ವಿಚಾರಧಾರೆಯ ಬಗ್ಗೆ ಸೂಕ್ಷ್ಮವಾಗಿ ಬಿಡಿಸಿನೋಡುವ ಒಳನೋಟ ಹೊತ್ತು ಅದನ್ನು ಸಜ್ಜನಿಕೆಯಿಂದಲೇ ನಿರಾಕರಿಸುವವರು, ಅದೇ ವಿಚಾರದ ಅತಿವಾದಿಗಳೊಂದಿಗೆ ಸೇರಿ ಹಿಂಸಾತ್ಮಕ ಕೃತ್ಯಕ್ಕೆ ಪಿತೂರಿಯನ್ನು ಹೂಡುತ್ತಿದ್ದಾರೆನ್ನುವುದು ತರ್ಕಕ್ಕೆ ನಿಲುಕದ ಮಾತಾಗುತ್ತದೆ.

ಮಾರುಕಟ್ಟೆ ವ್ಯವಸ್ಥೆಯನ್ನು ಅಪ್ಪುವ ನವ ಉದಾರೀಕರಣದ ನೀತಿಯನ್ನೂ ತೇಲ್ತುಂಬ್ಡೆ ಪ್ರಶ್ನಿಸುತ್ತಾರೆ. ಮಾರುಕಟ್ಟೆಯ ಪ್ರತೀಕವೆನ್ನುವಂತೆ ಕಾಣುವ ಐಐಎಂನಲ್ಲಿ ವ್ಯಾಸಂಗ ಕೈಗೊಂಡ, ಅಧಿಕ ಬಂಡವಾಳ ಬೇಕಿರುವ ತೈಲೋತ್ಪನ್ನ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ತೇಲ್ತುಂಬ್ಡೆಯವರಿಗೆ ಬಂಡವಾಳದ ಅವಶ್ಯಕತೆಯ ಬಗ್ಗೆ ಅರಿವಿಲ್ಲವೆಂದು ವಾದಿಸಲಾಗುವುದಿಲ್ಲ. ಆ ವ್ಯವಸ್ಥೆಯ ಭಾಗವಾಗಿದ್ದು, ಸಮೀಪದಿಂದ ನೋಡುತ್ತಲೇ ಅದನ್ನು ಟೀಕೆಗೆ ಒಳಪಡಿಸುವುದು ಸರಳ ಸಂಗತಿಯೂ ಅಲ್ಲ. ನವ ಉದಾರೀಕರಣದ ನೀತಿಗಳು ಆರ್ಥಿಕ ಅಸಮಾನತೆಯನ್ನು ಹೆಚ್ಚಿಸಿವೆ ಎಂದೇ ಅವರು ವಾದಿಸುತ್ತಾರೆ. ಜಗತ್ತಿನಾದ್ಯಂತ ಕಮ್ಯುನಿಸ್ಟ್ ವಿಚಾರಧಾರೆ ತಂದ ಮರುವಿಂಗಡಣೆಯ ವಿಚಾರಧಾರೆ ನಶಿಸುತ್ತಿರುವಂತೆ, ಬಂಡವಾಳಶಾಹಿ ವಿಚಾರವಾದ ಏಕಕೇಂದ್ರಿತವಾಗಿ ಬೆಳೆದಿರುವುದನ್ನು ನಾವು ಕಾಣಬಹುದು. ಹೀಗಾಗಿ, ಕಮ್ಯುನಿಸ್ಟ್ ವಿಚಾರಧಾರೆಯ ಮೇಲೆ ಶಾಸನ ನಡೆಸುತ್ತಿದ್ದೇವೆಂದು ತೋರಿಸಿಕೊಳ್ಳುವ ಚೀನಾದಲ್ಲೂ ಆ ವಿಚಾರಧಾರೆ ಕೇವಲ ನಿರಂಕುಶತೆಯನ್ನು ಮುಂದುವರೆಸಲು ಸಹಾಯ ಮಾಡಿದೆಯೇ ಹೊರತು ಬಂಡವಾಳವನ್ನು ಮೂಲಭೂತ ಸಂಪನ್ಮೂಲ ಎಂದು ಪರಿಗಣಿಸುವುದನ್ನು ಬಿಟ್ಟಿಲ್ಲ. ಈ ವಿಚಾರಧಾರೆಯಿಂದ ಜಾಗತಿಕ ಮಟ್ಟದಲ್ಲಿ ಆರ್ಥಿಕ ಅಸಮಾನತೆ ಬೆಳೆದಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

ದುಡ್ಡು ಜಾತಿಯನ್ನು ನೋಡುವುದಿಲ್ಲ. ದಲಿತ ವ್ಯಾಪಾರಿಗಳೂ, ದಲಿತ ಕೋಟ್ಯಧಿಪತಿಗಳೂ ಇರುವ ಸಂದರ್ಭದಲ್ಲಿ ಜಾತಿ ಮುಖ್ಯವೇ ಎನ್ನುವ ಪ್ರಶ್ನೆಯನ್ನು ಎತ್ತುವಾಗ ಒಂದು ಪ್ರಶ್ನೆಯನ್ನು ಕೇಳಬೇಕು. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಮೊದಲು, ಅವಕಾಶಗಳ ಅಸಮಾನತೆಯನ್ನು ತೊಲಗಿಸಿದ್ದೇವೆಯೇ ಎನ್ನುವುದನ್ನು ಕೇಳಿಕೊಳ್ಳಬೇಕು. ಅವಕಾಶಗಳ ಅಸಮಾನತೆಯನ್ನು ನೀಗಿಸಬೇಕಾದರೆ ರಾಜಕೀಯ ಶಕ್ತಿಯೂ ಆ ಶಕ್ತಿಯಿಂದ ಹೊರಹೊಮ್ಮುವ ಸಾರ್ವತ್ರಿಕ ಮೂಲಭೂತ ಹಕ್ಕುಗಳ ಮಾತು ಪ್ರಾಮುಖ್ಯತೆಯನ್ನು ಪಡೆಯುತ್ತವೆ. ನಾಲ್ಕಾರು ದಲಿತ ವ್ಯಾಪಾರಿಗಳನ್ನು ಪ್ರದರ್ಶಿಸುವುದರಿಂದ ಇದು ಸಾಧ್ಯವಾಗುವುದಿಲ್ಲವೆಂದು ತೇಲ್ತುಂಬ್ಡೆ ಹೇಳುತ್ತಾರೆ. ನವ ಉದಾರೀಕರಣದಲ್ಲಿ ಮೂಲಭೂತ ಜವಾಬ್ದಾರಿಗಳಾದ ವಿದ್ಯೆ ಮತ್ತು ಆರೋಗ್ಯ ಸೇವೆಗಳನ್ನು ಖಾಸಗಿ ವಲಯಗಳಿಗೆ ಸುಪರ್ದು ಮಾಡಿಕೊಡುತ್ತಿರುವ ಈ ಕಾಲದಲ್ಲಿ ಆರ್ಥಿಕ